# ಡಾ. ಪಾಂಡುರಂಗ ವಾಮನ ಕಾಣೆ

ಲೋಕಪ್ರಸಿದ್ಧರಾದ ಡಾ. ಪಾಂಡುರಂಗ ವಾಮನ ಕಾಣೆ ಅವರನ್ನು ಗೌರವದಿಂದ ಕಾಣದ ಭಾರತೀಯನಿಲ್ಲ. ಧರ್ಮಶಾಸ್ತ್ರದ ಚರಿತ್ರೆಯನ್ನು ಎಂಟು ಮಹಾ ಸಂಪುಟಗಳಲ್ಲಿ ಬರೆದು ಭಾರತೀಯ ಸಂಸ್ಕೃತಿಗೆ–ಹಿಂದೂ ಸಂಸ್ಕೃತಿಗೆ–ಮಹೋಪಕಾರ ಮಾಡಿದ್ದಾರೆ. ಈ ವರ್ಷದ ರಿಪಬ್ಲಿಕ್ ಸಮಾರಂಭದಲ್ಲಿ ಡಾ. ಪಿ.ವಿ. ಕಾಣೆಯವರಿಗೆ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ಬಿರುದನ್ನು ಕೊಟ್ಟು ಗೌರವಿಸಲಾಗಿದೆ. ೮೩ ವರ್ಷದ ಡಾ. ಕಾಣೆಯವರ ಲೋಕೋಪಕಾರ ಏನೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಲಾಗಿದೆ.

## ಕಾಣೆ ಮನೆತನ

ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯು ಬಡಪ್ರಾಂತವಾದರೂ ಗೋಖಲೆ, ತಿಲಕರಂತಹವರಿಗೆ ಜನ್ಮವಿತ್ತು ಭಾರತದಲ್ಲೆಲ್ಲ ಪ್ರಖ್ಯಾತವಾಗಿದೆ. ಬಾಲಗಂಗಾಧರ ತಿಲಕರು ರಾಜಕೀಯದಲ್ಲೂ ಸಂಸ್ಕೃತ ವಿದ್ಯೆಯಲ್ಲೂ ಪ್ರಖ್ಯಾತರಾಗಿದ್ದರು. ಶ್ರೀ ಕಾಣೆ ರಾಜಕಾರಣಿಗಳೂ ಅಲ್ಲ, ಸಂಸ್ಕೃತ ಪ್ರಾಧ್ಯಾಪಕರೂ ಅಲ್ಲ. ಆದರೂ ಸಂಸ್ಕೃತ ವ್ಯಾಸಂಗಕ್ಕಾಗಿ ತಿಲಕರಂತೆಯೇ ತನುಮನಧನವನ್ನರ್ಪಿಸಿರುವರು.

ಕಾಣೆ ಮನೆತನದ ಜನ್ಮಭೂಮಿ ರತ್ನಗಿರಿ ಜಿಲ್ಲೆಯ ದಪೋಲಿ. ಪಾಂಡುರಂಗ ರಾಯರ ಪಿತೃಗಳಾದ ವಾಮನರಾಯರು ೧೮೭೪ರಲ್ಲಿ ಮೆಟ್ರಿಕ್ಯುಲೇಷನ್ ಮಾಡಿ, ೧೮೭೭ರಲ್ಲಿ ಡಿಸ್ಟ್ರಿಕ್ಟ್ ಪ್ಲೀಡರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ೧೮೭೮ ರಿಂದ ವಕಾಲತ್ತು ಆರಂಭಿಸಿದರು. ಪಾಂಡುರಂಗರಾಯರು ರತ್ನಗಿರಿ ಜಿಲ್ಲೆಯ ಚಿಪ್ಲೂನ ಬಳಿ ತಮ್ಮ ಮಾತಾಮಹನ ಮನೆಯಲ್ಲಿ ೭ನೇ ಮೇ, ೧೮೮೦ರಲ್ಲಿ ಜನಿಸಿದರು. ತಾಯಿ ಮನೆತನ ಚಿತಲೆ.

ದಪೋಲಿಯ ಎಸ್.ಪಿ.ಜಿ. ಮಿಷನ್ ಹೈಸ್ಕೂಲಿನಿಂದ ಬೊಂಬಾಯಿನ ವಿಲ್ಸನ್ ಕಾಲೇಜಿಗೆ ಬಂದು ೧೯೦೧ರಲ್ಲಿ ಬಿ.ಎ. ಪರೀಕ್ಷೆ ಮಾಡಿ, ಸಂಸ್ಕೃತ ಪ್ರವೀಣತೆಗೆ "ಭಾವುದಾಜಿ ಬಹುಮಾನ" ಪಡೆದರು. ಅದಕ್ಕೆ ಮುಂಚೆ ಸಂಸ್ಕೃತಕ್ಕಾಗಿ ಮೀಸಲಾದ ಪಾರಿತೋಷಕಗಳನ್ನು ಗಳಿಸಿದ್ದರು. ಸ್ನಾತಕರಾದ ಮೇಲೆ ವಿಲ್ಸನ್ ಕಾಲೇಜಿನಲ್ಲಿ "ದಕ್ಷಿಣ

ಫೆಲೋ" ಆದರು. ೧೯೦೨ರಲ್ಲಿ ಪ್ರಥಮ ತರಗತಿಯಲ್ಲಿ ಮೊದಲನೆ ಲಾ ಪರೀಕ್ಷೆಯಲ್ಲಿ ತೇರ್ಗಡೆ ಪಡೆದು, ೧೯೦೩ರಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಎಂ.ಎ. ಆದರು. ಆಗ "ಝಾಲ ವೇದಾಂತ ಬಹುಮಾನ"ವು ಬಂದಿತು. ೧೯೦೪ರ ಆಗಸ್ಟ್ ತಿಂಗಳಲ್ಲಿ ರತ್ನಗಿರಿಯ ಸರ್ಕಾರಿ ಪ್ರೌಢಶಾಲೆಯನ್ನು ಅಧ್ಯಾಪಕರಾಗಿ ಸೇರಿದರು. ೧೯೦೫ರಲ್ಲಿ ಸಂಸ್ಥಾನಕ್ಕೆಲ್ಲ ಮೊದಲಿಗರಾಗಿ ಸೆಕೆಂಡರಿ ಟೀಚರ್ಸ್ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ೧೯೦೬ರಲ್ಲಿ ಅಧ್ಯಾಪಕ ಪರೀಕ್ಷೆ ಮಾಡಿ ಸಂಸ್ಕೃತ ಅಲಂಕಾರ ಸಾಹಿತ್ಯದ ಮೇಲೆ ಬರೆದ ಪ್ರಬಂಧಕ್ಕೆ "ವಿ.ಎನ್. ಮಂಡಲಿಕರ ಚಿನ್ನದ ಪದಕ" ಪಡೆದರು, ೧೯೦೭ರ ಏಪ್ರಿಲ್‌ನಲ್ಲಿ ಎಲ್‌ಫಿನ್‌ಸ್ಟನ್ ಹೈಸ್ಕೂಲಿಗೆ ಮುಖ್ಯ ಸಂಸ್ಕೃತಾಧ್ಯಾಪಕರಾಗಿ ವರ್ಗವಾದರು. ಅದೇ ವರ್ಷ "ಆರ್ಯರ ಇತಿಹಾಸ ಪುರಾಣಗಳಲ್ಲಿ ಕಂಡುಬರುವ ನೀತಿ ನಡೆ" ಎಂಬ ಪ್ರಬಂಧಕ್ಕೆ ೧೫೦ ರೂಪಾಯಿನ ವಿ.ಎನ್. ಮಂಡಲಿಕ ಬಹುಮಾನ ಬಂದಿತು.

## ವಕೀಲ ವೃತ್ತಿ

೧೯೦೮ರಲ್ಲಿ ಪಾಂಡುರಂಗರಾವ್ ಕಾಣೆ ಅವರು ಲಾ ಪರೀಕ್ಷೆಯಲ್ಲಿ ತೇರ್ಗಡೆಯಾದರು. ೧೯೦೯ರಲ್ಲಿ ಪ್ರೊಫೆಸರ್ ಎಸ್.ಆರ್. ಭಂಡಾರಕರರ ಸ್ಥಾನದಲ್ಲಿ ಎಲ್‌ಫಿನ್‌ಸ್ಟನ್ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದರು. ಆದರೆ ವಿದ್ಯಾಭ್ಯಾಸ ಇಲಾಖೆಯಲ್ಲಿ ತಮಗಿಂತ ಕಡಿಮೆ ಅರ್ಹತೆ ಉಳ್ಳವರನ್ನು ಮೇಲಕ್ಕೆ ಹಾಕಿದುದರಿಂದ ಜೂನ್ ೧೯೧೧ರಲ್ಲಿ ರಾಜಿನಾಮೆ ಕೊಟ್ಟು ಹೈಕೋರ್ಟು ವಕೀಲರಾದರು. ೧೯೧೨ರಲ್ಲಿ ಹಿಂದೂ ಮತ್ತು ಮುಸ್ಲಿಮ್ ಲಾ ಗಳಲ್ಲಿ ಎಲ್.ಎಲ್.ಎಮ್. ಪಾಸಾದರು. ೧೯೧೩ರಲ್ಲಿ ಸಂಸ್ಕೃತ ಮತ್ತು ಸಂಬಂಧಪಟ್ಟ ಭಾಷೆಗಳ ಮೇಲೆ ವಿಲ್ಸನ್ ಫೈಲೊಲಾಜಿಕಲ್ ಅಧ್ಯಾಪಕರಾಗಿ ಆರು ಭಾಷಣಗಳನ್ನಿತ್ತರು. ೧೯೧೫-೧೬ರಲ್ಲಿ ಬೊಂಬಾಯಿ ವಿಶ್ವವಿದ್ಯಾನಿಲಯವು "ಮಹಾರಾಷ್ಟ್ರದ ಪ್ರಾಚೀನ ಭೂಗೋಳ"ದ ಮೇಲೆ ವಿಮರ್ಶೆ ನಡೆಸಲು ತಿಂಗಳಿಗೆ ೧೦೦ ರೂಪಾಯಿ ವಿದ್ಯಾರ್ಥಿವೇತನವನ್ನು ಕೊಟ್ಟಿತು. ೧೯೧೬ರಲ್ಲಿ ಹಂಗಾಮಿಯಾಗಿ ವಿಲ್ಸನ್ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು. ೧೯೧೭ ರಿಂದ ೧೯೨೩ರ ವರೆಗೆ ಬೊಂಬಾಯಿಯ ಲಾ ಕಾಲೇಜಿನಲ್ಲಿ ಲಾ ಪ್ರೊಫೆಸರಾಗಿದ್ದರು.

ಶ್ರೀ ಕಾಣೆ ಅವರು ೧೯೧೦ ರಿಂದ ೧೯೨೩ರ ವರೆಗೆ ಬೊಂಬಾಯಿ ವಿಶ್ವವಿದ್ಯಾಲಯದ ಸಂಸ್ಕೃತ ಪರೀಕ್ಷಕರಾಗಿದ್ದರು. ಎಲ್.ಎಲ್.ಬಿ. ಮತ್ತು ಎಲ್.ಎಲ್. ಎಂ.ಗೂ ಕೆಲವು ವರ್ಷ ಪರೀಕ್ಷಕರಾಗಿದ್ದರು. ಮದರಾಸ್, ನಾಗಪುರ, ಬನಾರಸ್, ಢಾಕ್ಕಾ ವಿಶ್ವವಿದ್ಯಾಲಯಗಳ ಪರೀಕ್ಷಕರಾಗಿಯೂ ಇದ್ದರು. ೧೯೧೯ ರಿಂದ ೧೯೨೮ರ ವರೆಗೆ ಬೊಂಬಾಯಿ ವಿಶ್ವವಿದ್ಯಾಲಯದ ಫೆಲೊ ಮತ್ತು ಕಲೆ-ನ್ಯಾಯ ವಿಭಾಗದ ಮೆಂಬರಾಗಿಯೂ ಇದ್ದರು. ಈಚಿನ ವರ್ಷಗಳಲ್ಲಿ ಅನೇಕ ಸಂಸ್ಥೆಗಳೊಡನೆ ಸಂಬಂಧ ಹೊಂದಿದ್ದರು. ರಾಯಲ್ ಏಷ್ಯಾಟಿಕ್ ಸೊಸೈಟಿಯ ಬಾಂಬೆ ಶಾಖೆ, ದಕ್ಷಿಣೀ ಬ್ರಾಹ್ಮಣ ಸಭಾ, ಮರಾಠೀಗ್ರಂಥ ಸಂಗ್ರಹಾಲಯ, ಭಂಡಾರ್ಕರ್ ಓರಿಯಂಟಲ್ ಇನ್ಸ್ಟಿಟ್ಯೂಟ್, ದಾಪೋಲಿ ಎಜುಕೇಷನ್ ಸೊಸೈಟಿ, ಮಹಾರಾಷ್ಟ್ರ ಸಾಹಿತ್ಯ ಪರಿಷತ್ - ಇತ್ಯಾದಿ.

ಲಾಯರಾಗಿ ಕೆಲಸಮಾಡುತ್ತ ವಿಶ್ವವಿದ್ಯಾಲಯ ಮುಂತಾದ ಸಂಸ್ಥೆಗಳೊಡನೆ ಸಂಬಂಧ ಬೆಳಸಿಕೊಂಡು ಬಂದಿದ್ದಾರೆ. ರಾಜಕೀಯದಲ್ಲಿ ಪ್ರವೇಶಿಸದಿದ್ದರೂ ೧೯೦೪ರ ಬೊಂಬಾಯಿ, ೧೯೦೭ರ ಸೂರತ್ ಕಾಂಗ್ರೆಸ್‌ಗಳಲ್ಲಿ ಹಾಜರಾಗಿದ್ದರು. ಫೈಸ್‌ಪುರ ಕಾಂಗ್ರೆಸ್‌ವರೆಗೂ ಅನೇಕ ಸಮಾವೇಶಗಳಲ್ಲಿ ಭಾಗವಹಿಸಿರುವರು. ೧೯೨೧ ರಿಂದ ಸುಮಾರು ಎಲ್ಲ ಮರಾಠಿ ಸಾಹಿತ್ಯ ಸಮ್ಮೇಳನಗಳನ್ನೂ ಅನೇಕ ಓರಿಯಂಟಲ್ ಕಾನ್ಫರೆನ್ಸ್‌ಗಳನ್ನೂ ನೋಡಿರುವರು. ಸಂಸ್ಕೃತ ವಿಜ್ಞಾನವನ್ನು ಮರಾಠಿಯಲ್ಲಿ ಪ್ರಚುರಿಸಲು ಮರಾಠಿಯಲ್ಲಿ ಅನೇಕ ಲೇಖನಗಳನ್ನು ಬರೆದಿರುವರು. ಅವರ ಲೇಖನಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

## ಧರ್ಮಶಾಸ್ತ್ರ ಚರಿತ್ರೆ

ಶ್ರೀ ಕಾಣೆ ಅವರು ತಮ್ಮ ೫೦ನೇ ವರ್ಷದಲ್ಲಿ ತಮ್ಮ ಉದ್ಗ್ರಂಥವಾದ 'ಧರ್ಮಶಾಸ್ತ್ರದ ಚರಿತ್ರೆ'ಯ ಪ್ರಥಮ ಸಂಪುಟವನ್ನು ಪ್ರಕಟಿಸಿದರು. ೬೦ನೇ ವರ್ಷದಲ್ಲಿ ಎರಡನೇ ಸಂಪುಟದ ಎರಡು ಭಾಗಗಳನ್ನು (೨೨೦೦ ಪುಟ) ಪ್ರಕಟಿಸಿದರು. ಇದುವರೆಗೂ ಎಂಟು ಮಹಾಸಂಪುಟಗಳು ಪ್ರಕಟವಾಗಿವೆ. ೧೯೪೧ರಲ್ಲಿ ಷಷ್ಟಿಪೂರ್ತಿಯಾದಾಗ ಶ್ರೀ ಕಾಣೆಯವರಿಗೆ ಪ್ರಪಂಚದ ಎಲ್ಲ ಭಾಗಗಳ ವಿದ್ವಾಂಸರೂ ಸಂಭಾವನಗ್ರಂಥವನ್ನರ್ಪಿಸಿದರು (Festschrift P.V. Kane). ೧೯೪೬ರಲ್ಲಿ ನಾಗಪುರದ ಓರಿಯಂಟಲ್ ಕಾನ್ಫರೆನ್ಸ್ ಪ್ರೆಸಿಡೆಂಟರಾಗಿದ್ದರು. ೧೯೪೭-೪೮ರಲ್ಲಿ ಬೊಂಬಾಯಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ ಆಫ್ ಓರಿಯಂಟಲಿಸ್ಟ್ಸ್ ಸಮಾವೇಶಗಳಿಗೆ ಶೀ ಕಾಣೆ – ೧೯೪೮ ಪಾರಿಸ್, ೧೯೫೧ ಇಸ್ತಾಂಬುಲ್, ೧೯೫೪ ಕೇಂಬ್ರಿಡ್ಜ್ – ಭಾರತದ ಪ್ರತಿನಿಧಿಗಳಾಗಿದ್ದರು. ೧೯೫೩ರಲ್ಲಿ ವಾಲ್ಟೈರಿನ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಅವಧಿ : ೧೯೫೩ ರಿಂದ ೧೯೫೬ ಸಂಸ್ಕೃತ ಸಾಹಿತ್ಯಕ್ಕಾಗಿ ಸಾಹಿತ್ಯ ಅಕಾಡಮಿಯು ೫೦೦೦ ರೂಪಾಯಿ ಬಹುಮಾನ ಕೊಟ್ಟಿತು. ಇಂಡಾಲಜಿಯಲ್ಲಿ ರಾಷ್ಟ್ರ ಪ್ರಾಧ್ಯಾಪಕ (ನ್ಯಾಷನಲ್ ಪ್ರೊಫೆಸರ್) ಆಗಿರುವರು. ೧೯೫೩ರಲ್ಲಿ ಭಾರತದ ರಾಜ್ಯಸಭೆಗೆ ನೇಮಿಸಲ್ಪಟ್ಟರು. ೧೯೫೮ರಲ್ಲಿ ಸರ್ಟಿಫಿಕೇಟ್ ಆಫ್ ಮೆರಿಟ್, ಶಾಲು ಮತ್ತು ಸನ್ನದು, ವರ್ಷಕ್ಕೆ ೧೫೦೦ ರೂಪಾಯಿಯಂತೆ ಜೀವಾವಧಿ ವಿಶ್ರಾಂತಿ ವೇತನವನ್ನು ಪಡೆದರು. ೧೮–೨–೬೩ರಲ್ಲಿ ಮುಂಬಯಿ ವಿಶ್ವವಿದ್ಯಾಲಯ ಎಲ್‌ಎಲ್.ಡಿ. ಪದವಿ ನೀಡಿತು.

## ಭಾರತರತ್ನ

ಈಗಿನ ಪ್ರಜಾಪ್ರಭುತ್ವ ದಿನ (೨೬–೧–೧೯೬೩) ಭರತಖಂಡದ ಅತ್ಯುತ್ತಮ ಪ್ರಶಸ್ತಿಯಾದ "ಭಾರತ ರತ್ನ" ಬಿರುದನ್ನು ತಮ್ಮ ೮೩ನೇ ವರ್ಷದಲ್ಲಿ ಪಡೆದಿರುವರು.

ಭಾರತೀಯ ಸಂಸ್ಕೃತಿಗೆ ಮೂಲಾಧಾರವಾದುದು ಧರ್ಮ. ಅಂತಹ ಧರ್ಮದ ವಿಮರ್ಶೆಗೆ ಅಧುನಿಕ ಪರೀಕ್ಷಾಕ್ರಮಕ್ಕೆ ನಿಲ್ಲುವ ಪ್ರಾಚೀನ ಧರ್ಮಶಾಸ್ತ್ರಗಳ ವಿವೇಕವು ಅವಶ್ಯಕ. ಧರ್ಮ-ಕರ್ಮ-ಜ್ಞಾನಗಳನ್ನು ಸಾಕ್ಷಾತ್ಕರಿಸಿಕೊಂಡಿರುವ ಶ್ರೀ ಕಾಣೆ ಅವರು ಹಿಂದಿನ ವಿಶ್ವರೂಪಾಚಾರ್ಯ ವಿಜ್ಞಾನೇಶ್ವರರಂತೆ ಈಗ ಧರ್ಮಶಾಸ್ತ್ರದ ಆಚಾರ್ಯರಾಗಿರುವರು. ಶ್ರೀ ಕಾಣೆ ಅವರಿಗೆ ಆರು ಮಂದಿ ಸಹೋದರರು, ಮೂವರು ಸಹೋದರಿಯರು ಇದ್ದರು. ಈಗ ಐವರು ಉಳಿದಿರುವರು. ಕಾಣೆ ಅವರ ಐದು ಮಕ್ಕಳಲ್ಲಿ ಒಬ್ಬನು ಟೆಕ್ನಾಲಜಿಯಲ್ಲಿ ಡಿ.ಎಸ್‌ಸಿ. ಪದವಿಯನ್ನು ಪಡೆದು ಬೊಂಬಾಯಿಯಲ್ಲಿರುವನು. ಒಬ್ಬ ಮಗಳನ್ನು ಪ್ರೊಫೆಸರ್ ಪಟವರ್ಧನ್ ಮದುವೆಯಾಗಿರುವರು. ಶ್ರೀ ಕಾಣೆ ಅವರ ಆರೋಗ್ಯ ಕೆಟ್ಟು ಕ್ಷೀರಾಹಾರವನ್ನೇ ಸೇವಿಸುತ್ತಿದ್ದರೂ ಈ ವಯಸ್ಸಿನಲ್ಲೂ ಧರ್ಮಶಾಸ್ತ್ರಗಳ ಮೇಲೆ ವಿಮರ್ಶೆ ಅಧ್ಯಯನಗಳನ್ನು ಮಾಡುತ್ತಿರುವರು. ವೈದಿಕ ಸಂಸ್ಕೃತಿಯು ಆಶಿಸಿದಂತೆ ಶ್ರೀಕಾಣೆಯವರು "ಶತಂ ಜೀವ ಶರದೋ ದೀರ್ಘಮಾಯುಃ"

## ಮುಖ್ಯ ಗ್ರಂಥಗಳು

ಸಂಪಾದಿಸಿದ ಗ್ರಂಥಗಳು – ವಿಶ್ವನಾಥನ ಸಾಹಿತ್ಯದರ್ಪಣ, ಬಾಣನ ಕಾದಂಬರಿ (ಪೂರ್ವ ಮತ್ತು ಉತ್ತರ ಭಾಗಗಳು), ಭವಭೂತಿಯ ಉತ್ತರ ರಾಮ ಚರಿತ, ಬಾಣನ ಹರ್ಷಚರಿತ, ಶಂಖಲಿಖಿತ ಧರ್ಮಶಾಸ್ತ್ರ, ನೀಲಕಂಠನ ವ್ಯವಹಾರ ಮಯೂಖ (ಇಂಗ್ಲಿಷ್ ಭಾಷಾಂತರ ಸಹಿತ), ಕಾತ್ಯಾಯನ ಸ್ಮೃತಿ ಸಾರೋದ್ಧಾರ. ಸ್ವತಂತ್ರ ಗ್ರಂಥಗಳು – ಸಂಸ್ಕೃತ ಅಲಂಕಾರ ಶಾಸ್ತ್ರದ ಚರಿತ್ರೆ, ಧರ್ಮಶಾಸ್ತ್ರದ ಚರಿತ್ರೆ (೮ ಸಂಪುಟ). ಲೇಖನಗಳು – ಮರಾಠಿಯಲ್ಲಿ : ಭಾರತ-ರಾಮಾಯಣ ಕಾಲೀನ ಸಮಾಜ ಸ್ಥಿತಿ, ಸಂಸ್ಕೃತ ಸಾಹಿತ್ಯ ಶಾಸ್ತ್ರಾ ಚಾ ಇತಿಹಾಸ್, ಧರ್ಮಶಾಸ್ತ್ರ ವಿಚಾರ, ಋಕ್‌ಸಾರ ಸಂಗ್ರಹ ಇತ್ಯಾದಿಗಳು.

ಇಂಗ್ಲಿಷು : ಭಾಮಹ ಮತ್ತು ದಂಡಿ, ಮಹಾರಾಷ್ಟ್ರದ ಪ್ರಾಚೀನ ಭೂಗೋಳ, ಶಂಕರಾಚಾರ್ಯರ ಹಿಂದಿನ ಭಾಷ್ಯಕಾರರು. ವಿಜ್ಞಾನೇಶ್ವರನ ಹಿಂದಿನ ಧರ್ಮಶಾಸ್ತ್ರ ಟೀಕಾಕಾರರು, ಗೋತ್ರ-ಪ್ರವರ, ಕಲಿವರ್ಜ್ಯ, ನಾಮಕರಣ, ಕಾಯಸ್ಥರು – ಇತ್ಯಾದಿ.